C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 118/2019

ದಿನಾಂಕ : 20.12.2022 ಪ್ರಮಾಣ ವಚನ ಬೋದಿಸಲಾಗಿದೆ ಸಿ. ಡಬ್ಲ್ಯೂ :1 ಪಿ. ಡಬ್ಲ್ಯೂ : 2

| | |
|---|---|
| ಸಾಕ್ಷಿದಾರರ ಹೆಸರು | ಟಿ. ಎಸ್ ಮುತ್ತುರಾಜು |
| ತಂದೆಯ ಹೆಸರು | ಟಿ. ಕೆ ಶಿವಣ್ಣ |
| ವಯಸ್ಸು | 38 ವರ್ಷ |
| ಉದ್ಯೋಗ | ಎಳನೀರು ವ್ಯಾಪಾರ |
| ವಾಸ | ಬೆಂಗಳೂರು |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನನ್ನ ಸ್ವಂತ ಊರು ತೊಪ್ಪನಹಳ್ಳಿ ಗ್ರಾಮ. ಚಾಸಾ-2 ಮತ್ತು 3 ನನ್ನ ಚಿಕ್ಕಪ್ಪನ ಮಕ್ಕಳು. ಚಾಸಾ-4 ಮತ್ತು 5, 10, 12 ನನ್ನ ಇನ್ನು ಒಬ್ಬ ಚಿಕ್ಕಪ್ಪನ ಮಕ್ಕಳು. ಚಾಸಾ-6 ನಮ್ಮ ಊರಿನವರು. ಚಾಸಾ-6 ರಿಂದ 9 ನಮ್ಮ ಊರಿನವರು. ಚಾಸಾ-13 ನಮ್ಮ ಊರಿನವರು. ಚಾಸಾ-15 ರಿಂದ 20 ನಮ್ಮ ಊರಿನವರಾಗಿದ್ದು ನನ್ನ ಪರಿಚಯಸ್ಥರಾಗಿರುತ್ತಾರೆ. ಆರೋಪಿಗಳು ನಮ್ಮ ಊರಿನವರಾಗಿದ್ದು ನನ್ನ ಪರಿಚಯಸ್ಥರಾಗಿರುತ್ತಾರೆ.

2. ನಾನು ಎಂಬಿಎ ಪದವೀಧರ. ನಾನು ಮತ್ತು ಟಿ ಎಸ್ ಪ್ರಸನ್ನ ನನ್ನ ತಂದೆ ತಾಯಿಯ ಇಬ್ಬರು ಮಕ್ಕಳು. ನನ್ನ ತಮ್ಮ ಟಿ ಎಸ್ ಪ್ರಸನ್ನ ನನ್ನ ತಂದೆ ತಾಯಿಗಳೊಂದಿಗೆ ಊರಿನಲ್ಲಿ ವಾಸವಿದ್ದು, ಎಳನೀರು ವ್ಯಾಪಾರ ಮಾಡುತ್ತಿದ್ದನು.

3. 2006 ರಿಂದ ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ. ಮೊದಲು ನಾನು ಬೇರೆ ಬೇರೆ ಕಂಪನಿಗಳಲ್ಲಿ ಕೆಲಸ ಮಾಡುತ್ತಿದ್ದು, ಘಟನೆ ನಡೆದ ಸಮಯದಲ್ಲಿ ಅಂದರೆ 2014 ರಿಂದ 2016 ರವರೆಗೂ ಹೆಚ್. ಡಿ. ಎಫ್. ಸಿ., ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ. ಅದೇ ಸಮಯದಲ್ಲಿ ನಾನು ಮತ್ತು ಚಾಸಾ-3 ಶಿವು ಬೆಳಗಿನ ಜಾವದ ಸಮಯದಲ್ಲಿ ಚಾಮರಾಜನಗರದಿಂದ ಎಳನೀರನ್ನು ಟಾಟಾ 407 ವಾಹನದಲ್ಲಿ ತರಿಸಿ ಹೋಲ್ ಸೇಲ್ ವ್ಯಾಪಾರ ಮಾಡುತ್ತಿದ್ದೆವು.

4. ದಿಃ 25.12.2016 ರಂದು ಭಾನುವಾರವಾಗಿದ್ದು, ಕೆಲಸಕ್ಕೆ ರಜೆ ಇದ್ದುದರಿಂದ ಬೆಳಗ್ಗೆ 8.00 ಗಂಟೆ ಸಮಯದಲ್ಲಿ ಬೆಂಗಳೂರಿನ ಮತ್ತಿಕರೆಯ ರಾಮಯ್ಯ ಕಾಲೇಜಿನ ಬಳಿ ಎಳನೀರನ್ನು ಅನ್ ಲೋಡ್ ಮಾಡಿಸುತ್ತಿದ್ದೆನು. ಆ ಸಮಯದಲ್ಲಿ ನನ್ನೊಂದಿಗೆ ಚಾಸಾ-3 ಶಿವು ಇದ್ದನು. ಆ ಸಮಯದಲ್ಲಿ ಗ್ರಾಮದಲ್ಲಿದ್ದ ನನ್ನ ತಮ್ಮ ಪ್ರಸನ್ನನ ಜೊತೆಗೆ ಚಾಸಾ-2 ಹೇಮಂತ ಕುಮಾರ್ ಕೆಲಸ ಮಾಡುತ್ತಿದ್ದವನು ನನಗೆ ಫೋನ್ ಮಾಡಿ ನಿನ್ನ ತಮ್ಮ ಪ್ರಸನ್ನನಿಗೆ ಕಲ್ಲಿನಲ್ಲಿ ಹೊಡೆದಿದ್ದಾರೆ ಅವನ ತಲೆಗೆ ತುಂಬಾ ಏಟಾಗಿ ರಕ್ತ ಬರುತ್ತಿದೆ ಎಂದು ಹೇಳಿದನು. ನಾನು ಎಳನೀರು ಅನ್ ಲೋಡ್ ಮಾಡಿದ ನಂತರ ಬೆಳಗ್ಗೆ 10.00 ಗಂಟೆ ಹೊತ್ತಿಗೆ ಬೆಂಗಳೂರಿನಿಂದ 407 ವಾಹನದಲ್ಲಿ ಶಿವುವೊಂದಿಗೆ ಪ್ರಸನ್ನನನ್ನು ನೋಡಲು ಹೊರಟೆನು. ಹೋಗುವಾಗ ದಾರಿಯಲ್ಲಿ ಊರಿನಲ್ಲಿದ್ದ ನನ್ನ ಚಿಕ್ಕಪ್ಪ ಮತ್ತು ಅವರ ಮಕ್ಕಳಿಗೆ ಫೋನ್ ಮಾಡಿ ಏನು ಘಟನೆ ನಡೆಯಿತು ಎಂದು ವಿಚಾರಿಸಿದೆನು. ಆಗ ಶಂಕರನ ಮಗ ಮುತ್ತ, ಮುತ್ತುವಿನ ತಾಯಿ ಲಕ್ಷ್ಮಿ, ಮುತ್ತುವಿನ ಅಜ್ಜಿ ಪುಟ್ಟಲಿಂಗಮ್ಮ, ಕುಂಟರಾಜು ಇವರುಗಳು ಹಾಲು ತರಲು ಹೋಗುತ್ತಿದ್ದ ನನ್ನ ಸಹೋದರ ಪ್ರಸನ್ನನಿಗೆ ಕಲ್ಲಿನಿಂದ ತಲೆಗೆ ಕುಂಟರಾಜುವಿನ ಮನೆಯ ಮುಂದೆ ಹೊಡೆದರು ಎಂದು ನನಗೆ ತಿಳಿಸಿದರು.

5. ನಾನು ವಿಷಯ ತಿಳಿದು ಮದ್ಯಾಹ್ನ 1.00 ಗಂಟೆ ಹೊತ್ತಿಗೆ ನಮ್ಮ ಊರಾದ ತೊಪ್ಪನಹಳ್ಳಿಯ ನಮ್ಮ ತೋಟದ ಮನೆಗೆ ಬಂದೆನು.

**(ಮುಂದುವರೆದ ಮುಖ್ಯ ವಿಚಾರಣೆಯನ್ನು ಸಾಕ್ಷಿಯ ಕೋರಿಕೆಯ ಮೇರೆಗೆ ಮುಂದೂಡಲಾಯಿತು).**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.